ವ್ರತಾಚರಣೆಗಳನ್ನು ಕೊನೆಗೊಳಿಸಿ, ಮನೆಯಲ್ಲಿದ್ದ ಎಲ್ಲ ದೇವರುಗಳನ್ನೂ ಹೊರಹಾಕಿ ದೇವಸ್ಥಾನಕ್ಕೆ ಸೇರಿಸಿಬಿಟ್ಟರು. ಮನೆಯಲ್ಲೇ ದೇವರ ಧ್ಯಾನ ಮಾಡುತ್ತಾ, ದೇವಸ್ಥಾನಕ್ಕೆ ಆಗೀಗ ಹೋಗುತ್ತಾ ಶಿವಾರಾಮ ಹೇಳಿದರು.

ಕೃಷ್ಣಭಟ್ಟ ಪೂಜೆ ಮಾಡುತ್ತಾ ತೋಟದ ಕೃಷಿಯಲ್ಲಿ ಜೀವನ ಸಾಗಿಸಿದ.

ಈ ಮಧ್ಯೆ ಊರಿಗೆ ಒಂದೇ ದೇವಸ್ಥಾನವಾದ್ದರಿಂದ ಎಲ್ಲರೂ ದೇವಸ್ಥಾನಕ್ಕೆ ಬಂದು ಹೋಗಲು ಪ್ರಾರಂಭಿಸಿದರು. ನಿತ್ಯ ಪೂಜೆ, ರಾಮನವಮಿ ಉತ್ಸವಗಳು ಪ್ರಾರಂಭಗೊಂಡಾಗ ಖರ್ಚು ಹೆಚ್ಚಾಗುತ್ತಾ ಹೋಯಿತು, ವರಾಡ ಹಾಕಿ ಊರಿನ ಎಲ್ಲರಿಂದಲೂ ಹಣ ವಸೂಲು ಮಾಡುವ ಪದ್ಧತಿ ಜಾರಿಗೆ ಬಂದಿತು. ಅದು ಊರಿನ ದೇವಸ್ಥಾನ ತಾನೇ?

★★★

ಕೇಶವ ಭಟ್ಟರದು ಪೌರೋಹಿತ್ಯ ಮನೆತನ. ಪೂಜೆ ಪುನಸ್ಕಾರಗಳು ಜಾಸ್ತಿ. ಊರಿನ ಹಲವು ಮನೆಗಳ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಅವರ ನೇತೃತ್ವದಲ್ಲೇ ನಡೆಯುತ್ತವೆ. ಸತ್ಯನಾರಾಯಣ ಕಥೆಯಿಂದ ಹಿಡಿದು ಚಂಡೀಹೋಮದವರೆಗೆ ಯಾವ ಧಾರ್ಮಿಕ ಕಾರ್ಯಕ್ರಮವನ್ನೂ ಅವರು ಶಾಸ್ತ್ರೋಕ್ತವಾಗಿ ಮಾಡಿಸಬಲ್ಲರು. ಜೊತೆಗೆ, ಜ್ಯೋತಿಷ್ಯ ಕಲಿತಿದ್ದ ಅವರಿಗೆ ಪ್ರತಿ ಮನೆಯ ಕುಟುಂಬದ ಸಮಸ್ಯೆಯನ್ನು ಆಕರ್ಷಕವಾಗಿ ಅವರ ಮನಸ್ಸಿಗೆ, ಹಿಡಿಸುವಂತೆ ಹೇಳುವ ಚಾಕಚಕ್ಯತೆಯೂ ಇತ್ತು. ಅವರವರ ಸಮಸ್ಯೆ ಬಿಚ್ಚಿಟ್ಟ ಮೇಲೆ ಅದಕ್ಕೆ ಪರಿಹಾರ ಹೇಳುವುದೂ ಅವರ ತಲೆಗೇ ಬರುತ್ತಿತ್ತು. ಪರಿಹಾರ ಕ್ರಮಗಳನ್ನು ಹೇಳುವುದರ ಜೊತೆಗೆ ಸಂಧಿ, ಶಾಂತಿ, ಹೋಮ ಹವನ ಮಾಡುವ ಜವಾಬ್ದಾರಿ ಅವರದೇ ಆಗಿ, ಅವರು ಯಾವಾಗಲೂ ಬಿಜಿಯಾಗಿಯೇ ಇರುತ್ತಿದ್ದರು.

ಹಲವು ವರ್ಷಗಳವರೆಗೆ ಅವರ ವೃತ್ತಿ ಚೆನ್ನಾಗಿಯೇ ನಡೆದುಕೊಂಡು ಹೋಯಿತು. ಊರಲ್ಲಿ ಅವರು ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು.

ಇತ್ತೀಚೆಗೆ ಅವರಿಗೆ ಕಾಡುತ್ತಿರುವ ಚಿಂತೆಯೇ ಬೇರೆ. ಅವರಿಗೆ ಗಂಡುಮಕ್ಕಳಿಲ್ಲ. ಮೂರು ಹೆಣ್ಣುಮಕ್ಕಳಿದ್ದು ಎಲ್ಲರಿಗೂ ಮದುವೆ ಮಾಡಿದ್ದಾರೆ. ಆದರೆ, ಪೌರೋಹಿತ್ಯದ ಕಥೆ? ಹೆಣ್ಣುಮಕ್ಕಳು ಈ ವೃತ್ತಿ ಮಾಡಲಾಗುವುದಿಲ್ಲ. ತಮ್ಮ ವೃತ್ತಿ ತಮ್ಮಲ್ಲಿಗೇ ಕೊನೆಗೊಳ್ಳುವ ಆತಂಕ ಅವರಿಗೆ. ಯಾವ ಅಳಿಯನೂ ಇವರ ಪೌರೋಹಿತ್ಯ ವೃತ್ತಿ ಮುಂದುವರೆಸುವ ಸ್ಥಿತಿಯಲ್ಲಿಲ್ಲ. ಅವರ್ಯಾರಿಗೂ ಪೌರೋಹಿತ್ಯದ ಗಂಧಗಾಳಿಯೂ ಇಲ್ಲ. ಆಸಕ್ತಿಯೂ ಇಲ್ಲ. ಅವರವರ ವೃತ್ತಿಯಲ್ಲಿ ಅವರಿದ್ದಾರೆ. ಕೇಶವ ಭಟ್ಟರಿಗೆ ಈಗ ಒಂದೇ ಚಿಂತೆ. ಅವರ ಆರೋಗ್ಯವೂ ಇತ್ತೀಚೆಗೆ ಹದಗೆಡುತ್ತಿದೆ. ಊರಿನ ಜನರ ಮನೆಯ ಪೌರೋಹಿತ್ಯವಿರಲಿ; ತಮ್ಮ ಮನೆ ದೇವರ ಪೂಜೆಯೂ ಕಷ್ಟವಾಗುತ್ತಿದೆ. ಮನೆ ದೇವರಿಗೆ ಅಬಿಗಾರ ಸೊನ್ನೆ.

ಮೊದಲಿನಿಂದ ಇರುವ ಮೂಲ ದೇವರುಗಳಲ್ಲದೆ ತಮ್ಮ ಕಾಲದಲ್ಲಿ ತಂದ ಉಗ್ರನರಸಿಂಹ ಸಾಲಿಗ್ರಾಮ, ಮತ್ತಿತರ ವಿಗ್ರಹಗಳಿವೆ. ತಮ್ಮ ವೃತ್ತಿಗೆ ಸಿಗುತ್ತಿರುವ ಗೌರವ, ಹೆಚ್ಚುತ್ತಿರುವ ಆರ್ಥಿಕ ಸಂಪಾದನೆ ಈ ಎಲ್ಲ ದೇವರ ಅನುಗ್ರಹವೇ ಸರಿ. ಈಗ ಈ ದೇವರುಗಳಿಗೆ ಪೂಜೆ ಸರಿಯಾಗಿ ಮಾಡಲು ತಮಗೆ ಆಗುತ್ತಿಲ್ಲ. ಈ ಸೀಮೆಯಲ್ಲಿ ಸ್ವಲ್ಪ ಆಚಾರ, ಶಾಸ್ತ್ರ ಬಲ್ಲವರು ಅಂದರೆ ಹೊಸಗದ್ದೆ ಲಕ್ಷ್ಮೀನಾರಾಯಣ ಭಟ್ಟರು. ಅವರನ್ನೇ ಕೇಳಿ ಪರಿಹಾರ ಕಂಡುಕೊಳ್ಳಬೇಕು.

ಮಾರನೆಯ ದಿನ ಹೊಸಗದ್ದೆಗೆ ಹೋಗಿ ಲಕ್ಷ್ಮೀನಾರಾಯಣ ಭಟ್ಟರನ್ನು ಕಂಡರು. ತಮ್ಮ ಸಮಸ್ಯೆಯನ್ನು ವಿವರಿಸಿದರು. ಎಲ್ಲ ಕೇಳಿದ ಲಕ್ಷ್ಮೀನಾರಾಯಣ ಭಟ್ಟರು ಹೇಳಿದರು. "ಮನೆ ಹತ್ತಿರ ಊರಲ್ಲಿ ಯಾರಾದರೂ ಮನೆಗೆ ಬಂದು ಪೂಜೆ ಮಾಡಿಕೊಡುವವರು ಇದ್ದಾರಾ? ಇದ್ದರೆ ಅವರಿಗೆ ಏನಾದರೂ ಕೊಟ್ಟು ಪೂಜೆ ಮಾಡಿಸುವುದು ಒಳ್ಳೆಯದು." ಸಲಹೆಯೇನೋ ಒಳ್ಳೆಯದೇ.